



ರವಿಕೆಗಳು. ಇಂದು ಆನ್‌ಲೈನ್‌ನಲ್ಲಿಯಂತೂ 100 ರಿಂದ 5000 ಸಾವಿರ ರೂಪಾಯಿವರೆಗಿನ ಕಲಾತ್ಮಕ ರವಿಕೆಗಳು ದೊರೆಯುತ್ತಿವೆ. ಇದು ಕೆಲವೊಮ್ಮೆ ಸಡಗರಕ್ಕೆ ಸಾಕ್ಷಿಯಾದರೂ ಸೀರೆಯ ಅಂದ ಹೆಚ್ಚಿಸುವುದು ಮೈ ಅಳತೆಗೆ ಒಪ್ಪುವಂತೆ ಹೊಲಿದ ರವಿಕೆಗಳೇ. ದರ್ಜಿಯ ಬಳಿ ಹೊಲಿಸುವ ರವಿಕೆಗಳು ಸೀರೆಯ ಅಂದವನ್ನು ದ್ವಿಗುಣಗೊಳಿಸುತ್ತವೆ. ಜಾಗತೀಕರಣದ ಈ ಕಾಲಘಟ್ಟದಲ್ಲಿಯೂ ದರ್ಜಿಗಳು ಉಳಿದುಕೊಂಡಿರುವುದಕ್ಕೆ ಇದೇ ಕಾರಣ. ದರ್ಜಿ ಮೈ ಅಳತೆಗೆ ತಕ್ಕಂತೆ ಹೊಲಿಯುವ ರವಿಕೆ ಅದಕ್ಕೆ ಕಟ್ಟುವ ಕುಚ್ಚು ಆಕೆಯ ಅಂದಕ್ಕೆ ಮೆರಗು ನೀಡುತ್ತದೆ.

ಸಾಧಾರಣ ರವಿಕೆಗಳಿಗೆ ಮಾಡುವ ಕಸೂತಿ, ಕಟ್ಟುವ ಕುಚ್ಚು, ಚಂದದ ವಿನ್ಯಾಸದಿಂದಾಗಿ ಸೀರೆ ಬೆಲೆಗಿಂತ ರವಿಕೆ ಬೆಲೆ ಹೆಚ್ಚಾದರೂ ಅಚ್ಚರಿಯಿಲ್ಲ. ರವಿಕೆ ವಿನ್ಯಾಸಕಾರರೂ ಕೂಡ ತಮ್ಮ ಗ್ರಾಹಕರ ಮನಕ್ಕೆ ಒಪ್ಪುವ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿರುತ್ತಾರೆ. ತೋಳುಗಳು ಕೂಡ ಒಮ್ಮೆ ಗಿಡ್ಡ, ಉದ್ದ, ಸ್ಲೀವ್‌ಲೆಸ್... ಹೀಗೆ ಬದಲಾಗುತ್ತಲೇ ಇರುತ್ತವೆ. ಸಿಂಪಲ್ ಸೀರೆಗೆ ಅದ್ದೂರಿ ರವಿಕೆ ಈಗಿರುವ ಟ್ರೆಂಡ್. ಹಾಗೇ ಸೀರೆ ಬಣ್ಣಕ್ಕೆ ತದ್ವಿರುದ್ಧ ಬಣ್ಣದ ರವಿಕೆ ಹೊಲಿಸುವುದೂ ಇಂದಿನ ಫ್ಯಾಷನ್. ಇದಕ್ಕೆ ವಯಸ್ಸಿನ ಭೇದವಿಲ್ಲ.

## ರವಿಕೆಯ ನೆಕ್..

ರವಿಕೆಗಳ ನೆಕ್ ಬದಲಾವಣೆಗೆ ಚಲನಚಿತ್ರಗಳೂ ಕಾರಣವಾಗುತ್ತವೆ. ಒಂದು ಕಾಲದಲ್ಲಿ ಸುಹಾಸಿನಿ ನೆಕ್, ರವೀನಾ ಟಂಡನ್ ನೆಕ್, ವಿದ್ಯಾಬಾಲನ್ ನೆಕ್... ಹೀಗೆ ಆಯಾಕಾಲಕ್ಕೆ ತಕ್ಕಂತೆ ಹೈನೆಕ್, ಬೋಟ್ ನೆಕ್ ಮುಂತಾದ ಬೇಡಿಕೆಗಳನ್ನು ಗ್ರಾಹಕರು ಇಟ್ಟಾಗ ಸಿಂಪಿಗರೂ ಕೂಡ ಅದನ್ನು ಅಳವಡಿಸುವಲ್ಲಿ ಅಪ್‌ಡೇಟ್ ಆಗಬೇಕಾಗುತ್ತದೆ. ಧಾರಾವಾಹಿ, ಚಲನಚಿತ್ರಗಳಲ್ಲಿನ ಪಾತ್ರಗಳ ಟ್ರೆಂಡ್ ಅನ್ನು ಗ್ರಾಹಕರು ತಂದಾಗ ದರ್ಜಿ ಅದಕ್ಕೆ ತಕ್ಕಂತೆ ವಿನ್ಯಾಸ ಮಾಡಬೇಕಾಗುತ್ತದೆ. ಒಮ್ಮೆ ಒಪ್ಪಿತರಾದ ದರ್ಜಿಗಳನ್ನು ಗ್ರಾಹಕರು ಪದೇ ಪದೇ ಬದಲಿಸುವುದೂ ಇಲ್ಲ. ನಾನು ಬೆಂಗಳೂರಿನಲ್ಲಿ 30 ವರ್ಷಗಳಿಂದ ಒಬ್ಬರೇ ದರ್ಜಿಯನ್ನು ನನ್ನ ರವಿಕೆ ಹೊಲಿಯಲು ನಂಬಿದ್ದೇನೆ.

ಆಧುನಿಕತೆ ಎಷ್ಟೇ ಬಂದಿದ್ದರೂ ಸೀರೆಗಿರುವ ಬೆಡಗು ಬಿನ್ನಾಣ ಒಂದಿಂಚೂ ಕಡಿಮೆಯಾಗಿಲ್ಲ. ಸಿಂಧೂ ನಾಗರಿಕತೆಯ ಕಾಲದಿಂದಲೂ ಸೀರೆ ಇತ್ತು ಎನ್ನಲಾಗುತ್ತದೆ. ಭಾರತ, ನೇಪಾಳ, ಪಾಕಿಸ್ತಾನ, ಬಾಂಗ್ಲಾ ಮುಂತಾದ ದೇಶಗಳಲ್ಲಿ ಮಹಿಳೆಯರು ಹೆಚ್ಚಾಗಿ ಸೀರೆಯನ್ನು ಬಳಸುತ್ತಿದ್ದಾರೆ. ಸಾಂಪ್ರದಾಯಿಕ ಭಾರತೀಯ ಉಡುಪು ತನ್ನ ಸಾಂಸ್ಕೃತಿಕ ವೈವಿಧ್ಯದಿಂದಾಗಿ ಜನಮನ ಸೆಳೆಯುತ್ತಿದೆ.

ಆಧುನಿಕ ಮನೋಭಾವದ ಹೆಂಗಳೆಯರು ಕೂಡ ಸಾಂಪ್ರದಾಯಿಕ ಹಬ್ಬ, ಮದುವೆಗಳಲ್ಲಿ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಸೀರೆಯುಡುತ್ತಾರೆ. ಇಂದು ಮಾರುಕಟ್ಟೆಯಲ್ಲಿ ರೆಡಿಮೇಡ್ ಸೀರೆಗಳು ಬಂದಿದ್ದರೂ 5–6 ಮೀಟರ್ ಸೀರೆಯನ್ನು ಮೈತುಂಬಾ ಧರಿಸಿ ಅದಕ್ಕೆ ಒಪ್ಪುವ ಒಡವೆ, ಅಲಂಕಾರಗಳ ಮೂಲಕ ಯುವತಿಯರು ತಮ್ಮ ಅಂದವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಕ್ರೋಶದಿಂದ ವಿವಿಧ ರೀತಿಯ ವಿನ್ಯಾಸ ಮಾಡಬಹುದು. ಇದಕ್ಕೆ ವಿವಿಧ ರೀತಿಯ ಮಣಿಗಳು, ಮುತ್ತುಗಳು, ಚಮ್ಕಿಗಳು ಹಾಗೂ ಜರಿಗಳನ್ನು ಜೋಡಿಸುತ್ತಾರೆ. ಇದು ಮದುವೆಯ ಸೀರೆಯ ರವಿಕೆಗೆ ಹೆಚ್ಚು ಮೆರುಗನ್ನು ನೀಡುತ್ತದೆ. ಕ್ರೋಶದಿಂದ ಮಾಡುವಾಗ ಸೀರೆಗೆ ಹೊಂದುವಂತಹ ಅದೇ ಬಣ್ಣದ ಸಿಲ್ಕ್ ಥ್ರೆಡ್ ಮತ್ತು ಕುಚ್ಚನ್ನು ಕಟ್ಟಲು ಜರಿ ಥ್ರೆಡ್‌ಗಳನ್ನು ಬಳಸುತ್ತಾರೆ. ಅದೇ ರೀತಿ ಬ್ಲೌಸ್‌ಗಳಿಗೂ.

ವಿವಿಧ ರೀತಿಯ ಮಣಿಗಳನ್ನು ಬಳಸಿ ಮಾಡುವಂತಹ ರಿಂಗ್ ಬೀಡ್ಸ್, ರೌಂಡ್ ಬೀಡ್ಸ್ ಡೋನಟ್ ಬೀಡ್ಸ್, ದೊಡ್ಡ ಬೀಡ್ಸ್, ಸ್ಕ್ವೇರ್ ಬೀಡ್ಸ್, ಡೈಮಂಡ್ ಆಕಾರದ ಬೀಡ್ಸ್, ಇತ್ಯಾದಿ ಈಗೀಗ ಜನಪ್ರಿಯವಾಗುತ್ತಿವೆ. ವಿವಿಧ ರೀತಿಯ ಹೂವಿನ ಆಕಾರದ ಹಾಗೂ ಎಲೆಯ ಆಕಾರದ ಕುಚ್ಚುಗಳು ಬಂದಿವೆ. ಸೀರೆಯಲ್ಲಿರುವ ಡಿಸೈನ್‌ಗಳನ್ನೇ ರವಿಕೆ ಕುಚ್ಚುಗಳಲ್ಲಿಯೂ ಬಳಸಬಹುದು. ಈ ರೀತಿಯ ಬೀಡ್ಸ್‌ಗಳನ್ನು ಬಳಸಿ ಮಾಡುವ ಗ್ರಾಂಡ್ ಕುಚ್ಚುಗಳು ರೇಷ್ಮೆ ಸೀರೆ ಹಾಗೂ ಅದಕ್ಕೊಪ್ಪುವ ರವಿಕೆಗೆ ಹೆಚ್ಚು ಸೂಕ್ತ.

ಸೀರೆ ಹಾಗೂ ರವಿಕೆಗಳಿಗೆ ಕುಚ್ಚು ಕಟ್ಟುವುದು ನಾಜೂಕಿನ ಕೆಲಸ. ನೋಡುವುದಕ್ಕೆ ಬಹಳ ಸರಳ ಎನಿಸುವ ಇದನ್ನು ಹಾಕಲು ತುಂಬ ಸಮಯ ಬೇಡುತ್ತದೆ. ತಾಳ್ಮೆಯೂ ಬೇಕು. ಇದು ನೀಟಾಗಿ ಬಂದರೆ ಮಾತ್ರ ಚೆನ್ನಾಗಿ ಕಾಣಿಸುತ್ತದೆ.



ರಂಗಸ್ವಾಮಿ